# ದೇವರನ್ನು ಹೂಳಿದವನು

ಕಿಲಾತನ ಗಾಡಿಯಲ್ಲಿ ಹೇರಿಕೊಂಡು ಬಂದಿದ್ದ ಆವೆ ಮಣ್ಣಿನ ರಾಶಿಯನ್ನು ಗುದ್ದಲಿಯಿಂದ ಅಂಗಳದ ಒಂದು ಮೂಲೆಗೆ ಎಳೆದು ದಣಿದಿದ್ದ ಬಚ್ತೀಸ್ ಪಿಂಟೊ ಒಂದು ನಿಡಿದಾದ ಉಸಿರನ್ನು ಹೊರಚೆಲ್ಲಿದ. ಆ ನಿಟ್ಟುಸಿರಿನಲ್ಲಿ ಅಡಗಿದ್ದ ಅದೆಷ್ಟೋ ಹತಾಶೆ ಅಸಮಾಧಾನಗಳು ಗಾಳಿಯೊಳಗೆ ಲೀನವಾದವು. ಬದುಕು ಸಾಗಿಸಲು ಕಷ್ಟಪಟ್ಟು ಎಷ್ಟು ದುಡಿದು ಹೈರಾಣಾದರೂ ತಲೆಗೆ ಎಳೆದರೆ ಕಾಲಿಗಿಲ್ಲ, ಕಾಲಿಗೆಳೆದರೆ ತಲೆಗಿಲ್ಲ ಎಂಬಂತಹ ಪರಿಸ್ಥಿತಿ.

ತಲೆಗೆ ಸುತ್ತಿದ್ದ ಭೈರಾಸನ್ನು ಬಿಡಿಸಿ ಒಮ್ಮೆ ಜೋರಾಗಿ ಕೊಡವಿಕೊಂಡು ಎರಡೂ ಕೈಗಳ ಮಧ್ಯೆ ಹಿಗ್ಗಲಿಸಿ ಮುಖ, ಹಣೆ ಮತ್ತು ಕತ್ತಿನ ಸುತ್ತ ಇಳಿದಿದ್ದ ಬೆವರನ್ನು ಚೆನ್ನಾಗಿ ಒರೆಸಿದ. ಬೆವರು ಹರಿದು ಶೀತ ಆದಂತಾಗಿ ಮೂಗಿನಿಂದ ಒಸರುತ್ತಿದ್ದ ದ್ರವವನ್ನು ಎರಡೂ ಹೊಳ್ಳೆಗಳನ್ನು ಬೆರಳುಗಳಿಂದ ಒತ್ತಿ ಹಿಡಿದು ಸಶಬ್ದವಾಗಿ ಹೊರಹಾಕುತ್ತಾ ಅಂಗಳದ ತಡೆಗೋಡೆಗೆ ಕಟ್ಟಿದ್ದ ಕಲ್ಲಿಗೆ ಬೆರಳುಗಳನ್ನು ಒರೆಸಿದ. ಹಳದಿ ಹೂಗಳನ್ನು ಹೊತ್ತಿದ್ದ ಶರಟಿಗೆ ಅಂಟಿದ್ದ ಮಣ್ಣಿನ ಕಣಗಳನ್ನು ಕೊಡವಿದರೂ ಕಲೆಗಳು ಹಾಗೇ ಉಳಿದುಕೊಂಡವು. ಕತ್ತನ್ನು ಹಿಂದಕ್ಕೆ ತಿರುಗಿಸಿ ಚಲ್ಲಣಕ್ಕೆ ಅಂಟಿದ್ದ ಮಣ್ಣಿನ ತುಣುಕುಗಳನ್ನೂ ಕೊಡವಿಕೊಂಡ. ಅವೂ ತಮ್ಮ ಕಲೆಗಳನ್ನು ಉಳಿಸಿಯೇ ಉದುರಿದವು. ಅಂಗಳದಲ್ಲಿ ಗಾಡಿ ತಂದು ನಿಲ್ಲಿಸಿದಾಕ್ಷಣ ಕಿಲಾತ ಕುಡಿಯುವ ನೀರಿಗೆ ಬೇಡಿಕೆಯನ್ನಿಟ್ಟಿದ್ದ. ಬಚ್ತೀಸ ಪಿಂಟೊನ ಹೆಂಡತಿ ಜುವಾನ್ನಾ ಒಂದು ಕಂಚಿನ ಚೆಂಬಿನಲ್ಲಿ ನೀರು ಮತ್ತು ತಾಳೆ ಬೆಲ್ಲ, ಕೊಬ್ಬರಿ ತುಂಡುಗಳನ್ನು ಒಂದು ಮಣ್ಣಿನ ತಾಟಿನಲ್ಲಿ ಇಟ್ಟು ಹೋಗಿದ್ದಳು. ಉಳಿದಿದ್ದ ಬೆಲ್ಲದ ತುಂಡುಗಳನ್ನು ಬಾಯಿಗೆಸೆಯುತ್ತಾ ಬಚ್ತೀಸ ನೀರಿನ ಚೆಂಬನ್ನು ಬಾಯಿಗೆತ್ತಿದ.

ಅಷ್ಟರಲ್ಲಿ ಬಚ್ತೀಸನ ತಮ್ಮ ಸಿಲಾ ಕೆಳಗೆ ಎಳೆದಿದ್ದ ಮಣ್ಣನ್ನು ಗುಡ್ಡೆ ಮಾಡಿ ಮುಗಿಸಿ ಬೆಲ್ಲ ಮತ್ತು ಕೊಬ್ಬರಿಯ ತುಂಡುಗಳನ್ನು ಹೆಕ್ಕಿ ಬಾಯಿಗೆಸೆದ. ಚೆಂಬಿನಲ್ಲಿ ನೀರು ಖಾಲಿಯಾಗಿತ್ತು. ಚೆಂಬನ್ನು ಎತ್ತಿ ಅವನು ಮನೆಯೊಳಗೆ ಹೋದ.

ಕೆಲ ವರ್ಷಗಳ ಹಿಂದೆ ಮಂದಾರ್ ಬಯಲಿನ ತಂಕು ಶೆಟ್ರು ತಮ್ಮ ಭತ್ತದ ಗದ್ದೆಗಳ ಪೈಕಿ ಒಂದರಲ್ಲಿ ಉತ್ಕೃಷ್ಟವಾದ ಆವೆಮಣ್ಣು ದೊರೆಯುತ್ತಿದೆ ಎಂದು ಗೊತ್ತಾಗಿದ್ದೇ ತಡ, ಅದನ್ನು ಹೆಂಚಿನ ಕಾರ್ಖಾನೆಗಳಿಗೆ ಮುಡಿಪಾಗಿಟ್ಟರು. ಲೋಡುಗಟ್ಟಳೆ ಮಣ್ಣು ಮಾರಿ ಶ್ರೀಮಂತರಾದರು. ಇದರ ಲೆಕ್ಕವಿಡಲು ತುಕ್ರನ ಮಗ ದೇಜುಗೆ ಕೆಲಸಕ್ಕಿಟ್ಟುಕೊಂಡರು.